# ಚುನಾವಣೆಗೆ ಯೋಗರಾಜ ಭಟ್ಟರು ‘ಚಂದನವನ’ದಲ್ಲಿ ಹಗ್ಗಜಗ್ಗಾಟ

ಭಟ್ಟರ ಹೊಸ ಅವತಾರಕ್ಕೆ ಚಿತ್ರರಂಗದಲ್ಲಿ ಮಿಶ್ರಪ್ರತಿಕ್ರಿಯೆ ವ್ಯಕ್ತವಾಗಿದೆ. ‘ಚಿತ್ರರಂಗದ ಹಿತದೃಷ್ಟಿಯಿಂದಲೇ ಚುನಾವಣೆಗೆ ನಿಲ್ಲುವುದಾದರೆ, ಈಗಾಗಲೇ ಸ್ಪರ್ಧೆಗೆ ನಿಂತಿರುವ ಸುಮಲತಾ ಅವರಿಗೆ ಬೆಂಬಲ ಸೂಚಿಸಿದರೆ ಸಾಕಿತ್ತು. ಅದನ್ನು ಬಿಟ್ಟು ತಾನೇನೋ ಕಡಿದು ಗುಡ್ಡೆ ಹಾಕ್ತೀನಿ ಅಂತ ಹೋದ್ರೆ ಮಣ್ಣು ಮುಕ್ಕುವುದು ಗ್ಯಾರಂಟಿ. ಗುರುರಾಘವೇಂದ್ರನ ಆಶೀರ್ವಾದ ಖಂಡಿತ ಭಟ್ಟರ ಮೇಲಿರುವುದಿಲ್ಲ’ ಎಂದು ಯೋಗರಾಜ ಭಟ್ಟರ ಆಪ್ತರೂ ಆಗಿರುವ ನಟ ಜಗ್ಗೇಶ್ ಅವರೇ ವ್ಯಂಗ್ಯವಾಡಿದ್ದಾರೆ. ಇನ್ನೋರ್ವ



ಹಿರಿಯ ನಟ ಅನಂತ್‌ನಾಗ್ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಮಾತನಾಡಿದ್ದಾರೆ. ‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರು ಬೇಕಾದ್ರೂ ಚುನಾವಣೆಗೆ ನಿಲ್ಲಬಹುದು. ನಿರ್ದೇಶಕ ಭಟ್ಟರು ರಾಜಕೀಯ ಮುಖಂಡನಾಗಲು ಹೊರಟಿದ್ದಾರೆ. ಎರಡೂ ಕ್ಷೇತ್ರ ಬೇರೆ ಬೇರೆ. ಆದ್ರೆ ಸ್ಕ್ರೀನ್‌ಪ್ಲೆ ಸರಿಯಿದ್ದರೆ ಎರಡೂ ಕಡೆ ಗೆಲ್ಲಬಹುದು’ ಎಂದು ಮಾರ್ಮಿಕವಾಗಿ ಮಾತನಾಡಿದ್ದಾರೆ. ಅಷ್ಟೇ ಅಲ್ಲ, ‘ಚುನಾವಣೆಗೆ ನಿಲ್ಲುತ್ತಿರುವುದು ಒಳ್ಳೆಯದೇ. ಆದರೆ ಈಗಾಗಲೇ ಮೋದಿ ದೇಶದಲ್ಲಿ ಬಹಳಷ್ಟು ಬದಲಾವಣೆ ತಂದಿದ್ದಾರೆ. ಬದಲಾವಣೆಯ ಕುರಿತು ಭಟ್ಟರಿಗೆ ಕಾಳಜಿ ಇದ್ದರೆ ಬಿಜೆಪಿಯಿಂದ ಸ್ಪರ್ಧಿಸಬಹುದಿತ್ತು. ಟಿಕೆಟ್ ಸಿಕ್ಕಿಲ್ಲದಿದ್ದರೆ ಮೋದಿ ಅವರ ಕುರಿತು ಒಂದು ಸಿನಿಮಾ ನಿರ್ದೇಶಿಸಿ ದೇಶಪ್ರೇಮ ಮೆರೆದು ಮುಂದಿನ ಚುನಾವಣೆಗೆ ಪ್ರಯತ್ನಿಸಬಹುದಿತ್ತು’ ಎಂದೂ ಹೇಳಿದ್ದಾರೆ.

### ಗಾಳಿ ಊದಿದ ರಾಧಿಕಾ ಪಂಡಿತ್

ನಟರಿಂದ ಹೀಗೆ ಟೀಕೆಯನ್ನು ಎದುರಿಸುತ್ತಿರುವ ಭಟ್ಟರಿಗೆ ಚಂದನವನದ ನಟೀಮಣಿಯರಿಂದ ಅಭೂತಪೂರ್ವ ಬೆಂಬಲ ಸಿಕ್ಕಿದೆ. ‘ಡ್ರಾಮಾ’ ಕ್ವೀನ್ ರಾಧಿಕಾ ಪಂಡಿತ್ ಅವರಂತೂ ಪ್ರಚಾರದಲ್ಲಿಯೂ ಪಾಲ್ಗೊಳ್ಳುವ ಉತ್ಸಾಹ ತೋರಿಸಿದ್ದಾರೆ.

‘ಡ್ರಾಮಾ’ ಟೈಮಿಂದ್ಲೂ ನಾನು ಭಟ್ಟರನ್ನು ನೋಡ್ತಾ ಬಂದಿದೀನಿ. ಅವ್ರೇನಾದ್ರೂ ಡಿಫರೆಂಟಾಗಿ ಮಾಡ್ತಾನೇ ಇರ್ತಾರೆ. ಅವ್ರು ಏನಾದ್ರೂ ಮಾಡ್ತಿದಾರೆ ಅಂದ್ರೆ ಅದರಲ್ಲಿ ಅರ್ಥ ಇರತ್ತೆ. ಯಶ್ ಹೇಗೆ ಸುಮಲತಾ ಆಂಟಿಗೆ ಬೆಂಬಲವಾಗಿ ನಿಂತಿದಾರೋ ನಾನೂ ಹಾಗೆ ಯೋಗರಾಜ್ ಭಟ್ಟರಿಗೆ ಬೆಂಬಲ ಕೊಡ್ತೀನಿ. ಯಾಕೆಂದರೆ ಇಡೀ ಚಿತ್ರರಂಗ ಒಂದು ಕುಟುಂಬ ಇದ್ದ ಹಾಗೆ. ಚಿತ್ರರಂಗಕ್ಕಿಂತಲೂ ಪರಿಣಾಮಕಾರಿಯಾಗಿ ರಾಜಕೀಯದ ಮೂಲಕ ಸಮಾಜವನ್ನು ಬದಲಿಸಬಹುದು. ಇಂಥ ಪ್ರಯತ್ನಕ್ಕೆ ಯಾರೋ ಮುಂದಾಗಿದಾರೆ ಅಂದ್ರೆ ಬೆಂಬಲ ನೀಡುವುದು ನಮ್ಮ ಕರ್ತವ್ಯ. ಮಗುವನ್ನು ನೋಡಿಕೊಂಡು ಚುನಾವಣಾ ಪ್ರಚಾರದಲ್ಲಿ ಭಾಗವಹಿಸಲಿಕ್ಕೆ ಕಷ್ಟ. ಆದ್ರೂ ಜವಾಬ್ದಾರಿಯುತ ನಾಗರಿಕಳಾಗಿ ಇದು ನನ್ನ ಕರ್ತವ್ಯ ಎಂದು ಭಾವಿಸಿಕೊಂಡು ಪ್ರಚಾರದಲ್ಲಿ ಭಾಗವಹಿಸುತ್ತೇನೆ’ ಎಂದು ಹೇಳಿದ್ದಾರೆ.

‘ಮುಂಗಾರು ಮಳೆ’ ಹುಡುಗಿ ಪೂಜಾ ಗಾಂಧಿ ಈಗಾಗಲೇ ಒಂದು ರಾಜಕೀಯ ಪಕ್ಷದ ಜತೆ ಗುರ್ತಿಸಿಕೊಂಡವರು. ಆದರೆ ಯೋಗರಾಜ ಭಟ್ಟರು ರಾಜಕೀಯ ಅಖಾಡಕ್ಕೆ ಇಳಿಯುತ್ತಿರುವ ಸುದ್ದಿ ಹೊರಬೀಳುತ್ತಿರುವಂತೆಯೇ ಅವರು ತಾವಿದ್ದ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಜತೆಗೆ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಭಟ್ಟರ ನಡೆಯನ್ನು ಸ್ವಾಗತಿಸಿರುವ ಅವರು ‘ಯೋಗರಾಜ ಭಟ್ಟರೊಬ್ಬರಿಗೆ ಮಾತ್ರವಲ್ಲ, ಚಿತ್ರರಂಗದ ಹಲವರಿಗೆ ರಾಜಕೀಯ ನಾಯಕರಾಗಿ



ಮಿಂಚುವ ಸಾಮರ್ಥ್ಯವಿದೆ. ಹಾಗಾಗಿ ನಾವೆಲ್ಲರೂ ಸೇರಿಕೊಂಡು ‘ಚಂದನವನ ಪಕ್ಷ’ ಕಟ್ಟಿ ವ್ಯವಸ್ಥೆಯ ಸುಧಾರಣೆಗಾಗಿ ಹೋರಾಡಬೇಕು’ ಎಂಬ ಇಂಗಿತ ವ್ಯಕ್ತಪಡಿಸಿದ್ದಾರೆ.

‘ಮೂಲತಃ ಧಾರವಾಡದವರೇ ಆಗಿರುವ ಮಯೂರಿ, ‘ಭಟ್ಟರ ಸಿನಿಮಾದಲ್ಲಿ ನಟಿಸಬೇಕು ಎಂಬುದು ನನ್ನ ಕನಸಾಗಿತ್ತು. ಆದರೆ ಅದು ಇದುವರೆಗೆ ಈಡೇರಿಲ್ಲ. ರಾಜಕೀಯವೂ ಒಂದು ಬಗೆಯಲ್ಲಿ ಸಿನಿಮಾವೇ. ಆ ಕ್ಷೇತ್ರದಲ್ಲಿ ಅವರು ನಿರ್ದೇಶಿಸುತ್ತಿರುವ ಸಿನಿಮಾದಲ್ಲಿ ನನ್ನ ಕೊಡುಗೆಯನ್ನೂ ಕೊಡುವ ಕಾಲ ಕೂಡಿ



ಬಂದಿರುವುದಕ್ಕೆ ಸಂತೋಷವಿದೆ. ನನ್ನೂರ ಜನರ ಮನೆಮನೆಗೆ ತೆರಳಿ ಗಾಳಿಪಟಕ್ಕೆ ವೋಟು ಒತ್ತುವಂತೆ ಬೇಡಿಕೊಳ್ಳುತ್ತೇನೆ’ ಎಂದು ಭಾವುಕಳಾಗಿ ನುಡಿದಿದ್ದಾರೆ. ಇನ್ನು ‘ಪಂಚತಂತ್ರ’ ಚಿತ್ರದ ನಾಯಕಿ ಸೋನಲ್, ‘ಪಂಚರಂಗಿ’ ನಾಯಕಿ ನಿಧಿ ಸುಬ್ಬಯ್ಯ, ಹಿರಿಯ ನಟಿಯರಾದ ಸುಧಾ ಬೆಳವಾಡಿ ಎಲ್ಲರೂ ಭಟ್ಟರ ಬೆನ್ನಿಗೆ ನಿಂತಿದ್ದಾರೆ.

### ಐಟಿ ಸೆಲ್‌ಗೆ ಪವನ್ ಕುಮಾರ್ ಶೆಲ್!

ಭಟ್ಟರ ಗರಡಿಯಲ್ಲಿಯೇ ಪಳಗಿದ ಪವನ್ ಕುಮಾರ್ ಈ ಎಲೆಕ್ಷನ್ ಸಮಯದಲ್ಲಿ ಸಾಮಾಜಿಕ ಜಾಲತಾಣ ಮತ್ತು ಅಂತರ್ಜಾಲದಲ್ಲಿ ವಿಭಿನ್ನವಾಗಿ ಪ್ರಚಾರ ಮಾಡುವ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ.

77ನೇ ಪುಟ ನೋಡಿ...